ಕರ್ನಾಟಕ ಸರ್ಕಾರ

ಸಂ:ಗ್ರಾಅಪ/485/ಗ್ರಾನೀಸ(1)2014

ಕರ್ನಾಟಕ ಸರ್ಕಾರದ ಸಚಿವಾಲಯ
ಬಹುಮಹಡಿಗಳ ಕಟ್ಟಡ,
ಬೆಂಗಳೂರು, ದಿನಾಂಕ:17.11.2014.

**ಇವರಿಂದ:**
ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ,
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ.

**ಮೊದಲ ಆದ್ಯತೆ / ತುರ್ತು**

**ಇವರಿಗೆ:**
ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ,
ಜಿಲ್ಲಾ ಪಂಚಾಯತ್,
**ಬಿಜಾಪುರ ಮತ್ತು ಬಾಗಲಕೋಟೆ.**

ಮಾನ್ಯರೆ,

ವಿಷಯ : ಮಾನ್ಯ ಉಚ್ಚ ನ್ಯಾಯಾಲಯ PIL 38276 ಕುರಿತಂತೆ ಅನುಪಾಲನ ವರದಿ ಕುರಿತು.

----

ಮೇಲ್ಕಂಡ ವಿಷಯ ಕುರಿತಂತೆ ಕರ್ನಾಟಕದ ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ಈಗಾಗಲೇ ಸರ್ಕಾರವು ಅನುಪಯುಕ್ತ ಕೊಳವೆ ಬಾವಿಗಳ ಸುರಕ್ಷತೆ ಸಲುವಾಗಿ ಮಾನ್ಯ ಸರ್ವೋಚ್ಚ ನ್ಯಾಯಾಲಯವು ಈ ದಿಸೆಯಲ್ಲಿ ನೀಡಿರುವ ಕಟ್ಟುನಿಟ್ಟಿನ ನಿರ್ದೇಶನಗಳನ್ನು ಪಾಲಿಸುವಂತೆ ಪುನರುಚ್ಚರಿಸಿದೆ. ಈ ಸಲುವಾಗಿ ಸರ್ಕಾರವು ಸುತ್ತೋಲೆ ಸಂಖ್ಯೆ:ಗ್ರಾಅಪ 142 ಗ್ರಾನೀಸ(4)2014, ದಿನಾಂಕ:06.08.2014 ಮತ್ತು ಸಂಖ್ಯೆ:ಗ್ರಾಅಪ 142 ಗ್ರಾನೀಸ(4)2014, ದಿನಾಂಕ:17.10.2014ರಲ್ಲಿ ನೀಡಿರುವ ಸೂಚನೆಗಳನ್ನು ಕಡ್ಡಾಯವಾಗಿ ಪಾಲಿಸಬೇಕು ಹಾಗೂ ಪ್ರತ್ಯೇಕವಾಗಿ ಪ್ರತಿ ಜಿಲ್ಲೆಯಲ್ಲಿನ ವಿಫಲ / ಅನುಪಯುಕ್ತ ಕೊಳವೆ ಬಾವಿಗಳ ಮಾಹಿತಿಯನ್ನು ಇಂಧೀಕರಿಸಿ ಸಾರ್ವಜನಿಕರ ಮಾಹಿತಿಗಾಗಿ ಪ್ರತಿಬಿಂಬಿಸಬೇಕು. ಮಾನ್ಯ ಉಚ್ಚ ನ್ಯಾಯಾಲಯವು ಆದೇಶಿಸಿದಂತೆ ಈಗಾಗಲೇ ಘಟಿಸಿರುವ **ಬಿಜಾಪುರ ಹಾಗೂ ಬಾಗಲಕೋಟೆ** ದುರಂತದ ಬಗ್ಗೆ ಈ ಕೆಳಕಂಡ ಮಾಹಿತಿಯನ್ನು Affidavit ರೂಪದಲ್ಲಿ ಸಲ್ಲಿಸಬೇಕಾಗಿರುವುದರಿಂದ ಸದರಿ ಮಾಹಿತಿಯನ್ನು ಸರ್ಕಾರಕ್ಕೆ ಜಾಗ್ರತೆಯಾಗಿ ಸಲ್ಲಿಸಲು ಕೋರಿದೆ.

- ಕೊಳವೆ ಬಾವಿ ದುರಂತ ನೆಡೆದ ಸ್ಥಳ, ಜನವಸತಿ, ತಾಲ್ಲೂಕು, ದಿನಾಂಕಗಳ ವಿವರ ಮತ್ತು ಸದರಿ ದುರಂತ ನೆಡೆದ ಸ್ವತ್ತು ಯಾರಿಗೆ ಸೇರಿದೆ ಎಂಬುದರ ಮಾಹಿತಿ.
- ಕೈಗೊಂಡ ಕ್ಷಿಪ್ರ / ಕಾರ್ಯಾಚರಣೆ ಮತ್ತು ಪರಿಹಾರ ಕ್ರಮಗಳ ಸಂಕ್ಷಿಪ್ತ ವರದಿ ಮತ್ತು ವೆಚ್ಚದ ವಿವರ.
- ಮೃತಪಟ್ಟ ಬಾಲಕ / ಬಾಲಕಿ ಕುಟುಂಬದವರಿಗೆ ನೀಡಿರುವ ಪರಿಹಾರದ ವಿವರ.
- ಈ ದುರಂತಕ್ಕೆ ಕಾರಣವಾಗಿರುವ ಖಾಸಗಿ ವ್ಯಕ್ತಿಗಳು, ಸಾಮಾನ್ಯ ಹಾಗೂ ಸರ್ಕಾರಿ ಅಧಿಕಾರಿಗಳು / ನೌಕರರ ಮೇಲೆ ಕ್ರಿಮಿನಲ್ ಮೊಕ್ಕದ್ದಮೆ ದಾಖಲಿಸಿದೆಯೇ, ವಿವರ ನೀಡುವುದು.
- ಪ್ರಾಣಹಾನಿ ಹಾಗೂ ಜೀವಹಾನಿ ತಡೆಯಲು ಕೈಗೊಂಡಿರುವ ವಿಶೇಷ ಕ್ರಮಗಳೇನು.

- ಇನ್ನು ಮುಂದೆ ಇಂತಹ ಪ್ರಕರಣಗಳು, ಮರುಕಳಿಸದಂತೆ ಎಚ್ಚರಿಕೆ ವಹಿಸಿರುವ ಕುರಿತು ಮತ್ತೊಮ್ಮೆ ಖಾತ್ರಿಪಡಿಸಬೇಕು.

ಮಾನ್ಯ ಉಚ್ಚ ನ್ಯಾಯಾಲಯವು, ದುರಂತವು ಸಂಭವಿಸಿದಲ್ಲಿ ಖಾಸಗಿ ವ್ಯಕ್ತಿಗಳು / ಸರ್ಕಾರಿ ಅಧಿಕಾರಿಗಳು ಮತ್ತು ನೌಕರರನ್ನು IPC Section 304(A) ಪ್ರಕಾರ ಕಾರಾಗೃಹಕ್ಕೆ ಕಳುಹಿಸುವ ಸಂಭವವಿರುವುದರಿಂದ ಎಲ್ಲಾ ಮುನ್ನೆಚ್ಚರಿಕೆ ಕ್ರಮಗಳನ್ನು ತೆಗೆದುಕೊಂಡು ಸುರಕ್ಷತಾ ಕ್ರಮ ವಹಿಸುವಂತೆ ಸೂಚಿಸಿದೆ.

ಅಂತೆಯೇ, ಸರ್ಕಾರವು ಈಗಾಗಲೇ ಸುತ್ತೋಲೆಗಳ ಮೂಲಕ ಸೂಚಿಸಿರುವಂತೆ ಸುರಕ್ಷಿತಾ ಕ್ರಮಗಳನ್ನು ಕಟ್ಟುನಿಟ್ಟಾಗಿ ಪಾಲಿಸಿ, ಯಾವುದೇ ದುರಂತಕ್ಕೆ ಅವಕಾಶವಿಲ್ಲದಂತೆ ಸದರಿ ಕ್ರಮಗಳನ್ನು ಜಾರಿಗೊಳಿಸುವಂತೆ ಸೂಚಿಸಿರುವುದನ್ನು ಮತ್ತೊಮ್ಮೆ ದೃಢೀಕರಿಸುತ್ತಾ, ಜಿಲ್ಲಾಧಿಕಾರಿಗಳೂ ಮತ್ತು ಜಿಲ್ಲಾ ಪಂಚಾಯತಿಗಳ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು **ದಿನಾಂಕ:20.11.2014ರೊಳಗೆ** ಸರ್ಕಾರಕ್ಕೆ ವರದಿ ನೀಡಬೇಕೆಂದು ಕೋರಿದೆ. ಆದುದರಿಂದ ರಾಜ್ಯದ ಎಲ್ಲಾ ಜಿಲ್ಲಾಧಿಕಾರಿಗಳು ಹಾಗೂ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಜಿಲ್ಲಾ ಪಂಚಾಯತ್‌ರವರು ಸರ್ಕಾರವು ಈಗಾಗಲೇ ಹೊರಡಿಸಿರುವ ಸುತ್ತೋಲೆ ಮತ್ತು ಆದೇಶಗಳನ್ವಯ ಎಲ್ಲಾ ಮುಂಜಾಗ್ರತಾ ಕ್ರಮಗಳನ್ನು ಕಟ್ಟುನಿಟ್ಟಾಗಿ ಕೈಗೊಂಡು / ಜಾರಿಗೊಳಿಸಿ ತತ್ಸಂಬಂದದ ಅನುಪಾಲನಾ ವರದಿಯನ್ನು ಸರ್ಕಾರಕ್ಕೆ ಕೂಡಲೇ ಸಲ್ಲಿಸಲು ಕೋರಿದೆ.

ತಮ್ಮ ವಿಶ್ವಾಸಿ,

(ರಾಮಕೃಷ್ಣ)
ಸರ್ಕಾರದ ಉಪ ಕಾರ್ಯದರ್ಶಿ(ಗ್ರಾನೀಸ)
ಗ್ರಾಮೀಣಾಭಿವೃದ್ಧಿ ಮತ್ತು ಪಂ. ರಾಜ್ ಇಲಾಖೆ.
**ಇಮೇಲ್:rk3452000@gmail.com**
**ಫೋನ್:22032806, ಫ್ಯಾಕ್ಸ್:22203175**

**ಪ್ರತಿ:**

1. ರಾಜ್ಯದ ಎಲ್ಲಾ 30 ಜಿಲ್ಲೆಗಳ ಜಿಲ್ಲಾಧಿಕಾರಿಗಳಿಗೆ.
2. ರಾಜ್ಯದ ಎಲ್ಲಾ 30 ಜಿಲ್ಲಾ ಪಂಚಾಯತಿಗಳ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳಿಗೆ.
3. ರಾಜ್ಯದ ಎಲ್ಲಾ 30 ಜಿಲ್ಲೆಗಳ ಪೋಲಿಸ್ ವರಿಷ್ಠಾಧಿಕಾರಿಗಳಿಗೆ (Superintendent of Police).
4. ರಾಜ್ಯದ ಎಲ್ಲಾ 38 ಇಂಜಿನಿಯರಿಂಗ್ ವಿಭಾಗಗಳ ಕಾರ್ಯಪಾಲಕ ಅಭಿಯಂತರರು, ಗ್ರಾಮೀಣ ನೀರು ಮತ್ತು ನೈರ್ಮಲ್ಯ ಇಲಾಖೆ / ಪಂಚಾಯತ್ ರಾಜ್ ಇಂಜಿನಿಯರಿಂಗ್ ಇಲಾಖೆ.
5. ರಾಜ್ಯದ ಎಲ್ಲಾ ತಾಲ್ಲೂಕು ಪಂಚಾಯತಿಗಳ (176) ಕಾರ್ಯನಿರ್ವಾಹಕ ಅಧಿಕಾರಿಗಳು.
6. ರಾಜ್ಯದ ಎಲ್ಲಾ 130 ತಾಲ್ಲೂಕುಗಳ ತಹಶಿಲ್ದಾರ್.
7. ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ವೆಬ್ ಸೈಟ್. ಮತ್ತು
8. ಸಂಪಾದಕರು, ಕರ್ನಾಟಕ ವಿಕಾಸ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆರವರ ಮಾಹಿತಿಗಾಗಿ ಮತ್ತು ಸೂಕ್ತ ಕ್ರಮಕ್ಕಾಗಿ ಕೋರಿ ಕಳುಹಿಸಿದೆ.